


# ರಾಜ್ಯೋತ್ಸವ ಎಂಬ ಥೀಮ್ ಪಾರ್ಟಿ



**ಕರ್ನಾಟಕದಾಚೆ ಕನ್ನಡದ ದೊಡ್ಡ ಸಂಭ್ರಮ ಅನಾವರಣ ಆಗುವುದು ಅಮೆರಿಕದ ಕನ್ನಡ ಸಂಘಗಳಲ್ಲಿ. ಅಲ್ಲಿನ ರಾಜ್ಯೋತ್ಸವ ಹೇಗಿರಬಹುದು? ಅಮೆರಿಕನ್ನಡಿಗರೂ 'ಹಿಜಾಬ್' ಖ್ಯಾತಿಯ ಕಾದಂಬರಿಕಾರರೂ ಆದ ಗುರುಪ್ರಸಾದ ಕಾಗಿನೆಲೆ ಅವರು ಚಿತ್ರಿಸಿರುವ ಈ 'ರಾಜ್ಯೋತ್ಸವ ಸಂಭ್ರಮ'ದ ಚಿತ್ರಗಳನ್ನು ಕೊಂಚ ಸಾವಧಾನದಿಂದ ನೋಡಿದರೆ, ಆ ಸಂಭ್ರಮ ಹಾಗೂ ಅದರ ಹಿಂದಿನ ತಳಮಳಗಳೆಲ್ಲ ಈ ನೆಲದ್ದೂ ಹೌದು ಅನ್ನಿಸುವುದಿಲ್ಲವೇ? ಹೇಳಿಕೇಳಿ ಲೇಖಕರು ಹೃದ್ರೋಗ ತಜ್ಞರು; ಅವರು ಕನ್ನಡಿಗರ ಹೃದಯಕ್ಕೇ ಕೈಹಾಕಿದಂತಿದೆ.**

ಪ್ರತಿವರ್ಷ ರಾಜ್ಯೋತ್ಸವ ನವೆಂಬರ್ ಒಂದಕ್ಕೇ ಬಂದರೂ, ಆ ತಿಂಗಳಲ್ಲಿ ಯಾವ ವಾರಾಂತ್ಯ ಎಲ್ಲರಿಗೂ ಅನುಕೂಲವಾಗುತ್ತದೋ, ಕೆಲಸದಿಂದ ಬಿಡುಗಡೆಯಾಗುತ್ತದೋ, ಬಿಡುವಾಗುತ್ತದೋ ಅಂದೇ ಭುವನೇಶ್ವರಿಯ ಹಬ್ಬ. ಕನ್ನಡಿಗರಿಗೆ ದೈನಂದಿನ ಹಬ್ಬವಾಗಬೇಕಾದ ಭುವನೇಶ್ವರಿಯ ಹುಟ್ಟುಹಬ್ಬ ಕೊಂಚ ತಡವಾದರೇನು?

ಎಂದೋ ತಂದಿದ್ದ ಮಕ್ಕಳ ಭಾರತೀಯ ದಿರಿಸುಗಳು ಅಂದು ಹೊರಬರುತ್ತವೆ. ಕಪಾಟಿನಲ್ಲಿ ಮುದುಡಿಕೂತಿದ್ದ ಹೆಂಗಸರ ತರತರಾವರಿ ಕುಬುಸಗಳು, ಸೀರೆಗಳು, ಭವಾನಿ ಕಂಗನ್ಸ್, ಕಮರ್ಷಿಯಲ್ ಬೀದಿಯ ಆಭರಣಗಳು ಒಡತಿಯನ್ನಲಂಕರಿಸಲು ಹೊರಬರುತ್ತವೆ. ಪ್ರತಿವರ್ಷ ಬೇರೆ ಥೀಮು. ಜಾನಪದ, ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಹಳೇ ಮೈಸೂರು—ಇತರೆ. ಥೀಮಿಗೆ ತಕ್ಕಂತೆ ದಿರಿಸು. ಡಾಬು, ಬುಲಾಕು, ನತ್ತು, ಝುಮುಕಿ, ಬಳೆ–ಸರಗಳು, ಕಿವಿಯ ಹ್ಯಾಂಗಿಂಗು, ನೆಕ್‌ಲೇಸುಗಳ ನಡುವೆ ಅಡಗಿರುವ ತಾಳಿ, ಕಾಲುಂಗುರಗಳು. ಐಫೋನಿಗೂ ಪಾಕೀಟಿರುವ ವೆಲ್‌ಕ್ರೋ, ಎಲಾಸ್ಟಿಕ್ಕಿರುವ ಕಚ್ಚೆಪಂಚೆ, ಮೇಲೆ ಡಿಸೈನರ್ ಜುಬ್ಬಾಗಳು, ಒಪ್ಪುವ ಜೈಪುರದ ವಿಕ್ರಮಾದಿತ್ಯನ ಚೂಪಾದ ಬೂಟು. ತಲೆಗೆ ಬಣ್ಣ ಬಣ್ಣದ ರುಮಾಲು. ವಿವಿಬೇಕರಿಯ ಬೆಣ್ಣೆ ಬಿಸ್ಕತ್ತು, ಮೈಸೂರು ಪಾಕು, ಜೋಳದ ರೊಟ್ಟಿ, ಬಿಬಿಬಾತು, ತಾಲೀಪಟ್ಟು, ಝುಣಕದವರೆಗೆ ಬೇರೆಬೇರೆ ತರದ ಕರ್ನಾಟಕದ ತಿಂಡಿಗಳು.

ಮಕ್ಕಳಿಗೆ ಏನೋ ಹಬ್ಬದ ವಾತಾವರಣ. ಏನಂತ ಗೊತ್ತಿಲ್ಲ. 'ಅಂಕಲ್ ಅಯಾಮ್ ಪರ್ಫಾರ್ಮಿಂಗ್ ಟುಡೇ' ಎಂದು ಯೂಟ್ಯೂಬಿನಲ್ಲಿ ಅಣ್ಣಾವರ 'ಜೇನಿನ ಹೊಳೆಯೋ, ಹಾಲಿನ ಮಳೆಯೋ'ದ ಕೊಳಲಿನ, ಪಿಟೀಲಿನ ನೋಟುಗಳನ್ನು ಹುಡುಕಿ ನುಡಿಸುವ ಹುಡುಗಿಯರು, ಪವರ್ ಸ್ಟಾರಿನ 'ಪಂಕಜ'ಳ ಹಾಡಿಗೆ ಕಾಲು ಹಾಕುವ ಹುಡುಗರು, 'ನಾ ಬಂದ್ಮೇಲೆ ನಮ್ದೇ ಹವಾ' ಎಂಬ ರಾಕಿಂಗ್ ಸ್ಟಾರ್‌ನ ಡಯಲಾಗು ಹೊಡೆಯುವ ಟೀನೇಜರುಗಳು, ಯೋಗರಾಜ ಭಟ್ರ ಮೆಡ್ಲಿಗೆ ಹಾಡುವ, ನರ್ತಿಸುವ ಜೀನ್ಸ್ ಪ್ಯಾಂಟಿನ, ಬಿಳಿ ಟಿ ಶರ್ಟಿನ ಪ್ರಬುದ್ಧ ಗಂಡಸರು, ತೋರುವ ಪ್ರಬುದ್ಧತೆಯನ್ನು ಮುಚ್ಚೆ ಮುಗ್ಧತೆಯನ್ನು ಚಿಮ್ಮಿಸುವ ಎಂದೂ ವಯಸೇ ಆಗಿಸದ ಫೌಂಡೇಶನ್ನಿತ್ಯಾದಿ ವರ್ಧಕಗಳ ಚಮತ್ಕಾರದಡಿಯಲ್ಲಿ ಎಲ್ಲರೂ ಅಕ್ಕ ತಂಗಿಯರೇನೋ ಎಂದು ಕಾಣುವ 18–49 ಹೆಂಗಸರು – ಒಟ್ಟು ಹಬ್ಬದ ಗಿಜಿಗಿಜಿ.

ಇನ್ನೂ ಚಿಕ್ಕ ಮಕ್ಕಳನ್ನು ಕೇಳಿದರೆ ಸಿಗುವ ಉತ್ತರ ಇನ್ನೂ ಚೆನ್ನು. 'ಟುಡೇ ಈಸ್ ಭುವನೇಶ್ವರೀಸ್

